# ಅಕ್ಟೋಬರ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ಬೆಳೆ ತೋಟಗಳಲ್ಲಿ ಅಂತರ ಬೆಳೆಗಳನ್ನು ಬೆಳೆಯುವಾಗ ತಾಳೆ ಗಿಡಗಳ ಸಮೀಪದಲ್ಲಿ ಉಳಿಮೆ ಮಾಡಬಾರದು ಹಾಗೂ ಹಸಿರು ಗರಿಗಳನ್ನು ತೆಗೆದಲ್ಲಿ ಇಳುವರಿ ಕಡಿಮೆಯಾಗುವುದು.

- ಅಂತರ ಬೆಳೆಗಳನ್ನು ಬೆಳೆಸುವಾಗ, ತಾಳೆ ಗಿಡಗಳ ಸಮೀಪದಲ್ಲಿ ಉಳಿಮೆ ಮಾಡಬಾರದು. ತಾಳೆ ತೋಟಗಳಲ್ಲಿಅಂತರ ಬೆಳೆಯನ್ನು ಬೆಳೆಸಬೇಕಾದಗ, ತಾಳೆ ಗಿಡಗಳಿಂದ 2 ರಿಂದ 3 ಮೀಟರಳಷ್ಟು ವ್ಯಾಸದ ಅಂತರ ಬಿಡಬೇಕು.

- ಆಗ ತಾನೆ ನಾಟಿ ಮಾಡಿದ ತಾಳೆ ಸಸಿಗಳಿಗೆ ಮೊದಲ ಕಂತಿನ ರಸಗೊಬ್ಬರವನ್ನು ೩ ತಿಂಗಳ ನಂತರ ನೀಡುವುದು. ೫೦ ರಿಂದ ೧೦೦ ಕೆ ಜಿ ಕೊಟ್ಟಿಗೆ ಗೊಬ್ಬರ ಅಥವಾ ೧೦೦ ಕೆ ಜಿ ಹಸಿರೆಲೆ ಗೊಬ್ಬರ ಪ್ರತಿ ತಾಳೆ ಮರಕ್ಕೆ ಎರಡನೇ ಕಂತಿನ ರಸಗೊಬ್ಬರ ನೀಡುವ ಸಂಧರ್ಬದಲ್ಲಿ ನೀಡುವುದು. ಪ್ರತಿ ತಾಳೆ ಮರಕ್ಕೆ ಪ್ರತಿ ವರ್ಷಕ್ಕೆ ೫ ಕೆ ಜಿ ಬೇವಿನ ಹಿಂಡಿ ಗೊಬ್ಬರವನ್ನು ನೀಡುವುದು ಉತ್ತಮ.

- ತಾಳೆ ಮರಗಳ ಕಾಂಡದ ಸಮೀಪಕ್ಕೆ ಉಳುಮೆ ಮಾಡುವುದು ಸೂಕ್ತವಲ್ಲ ಕಾರಣ ತೇವಾಂಶ ಮತ್ತು ಪೋಷಕಾಂಶವನ್ನು ಹೀರುವ ಬೇರುಗಳು ನಾಶವಾಗುತ್ತವೆ, ಮತ್ತು ಹಿಳುವರಿಯಲ್ಲಿ ಕುಂಠಿತವಾಗುತ್ತದೆ.